ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

## ಸ್ಪೆಷಲ್ ಕೇಸ್ ನಂಬ್ರ 124/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ಅರುಣ ಕುಮಾರ್ ಎನ್ ಎ. | ಪ್ರಾ.ಸಾಃ 17 |
| ತಂದೆಯ ಹೆಸರು | : | ಅಪ್ಪು | ಚಾ.ಸಾಃ 37 |
| ಪ್ರಾಯ | : | 40 ವರ್ಷ | **ದಿನಾಂಕಃ 14.12.2023** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ತಜ್ಞ ವೈದ್ಯರು, ತಾಲೂಕು ಆಸ್ಪತ್ರೆ ಉತ್ತರ ಕನ್ನಡ ಜಿಲ್ಲೆ. | |
| ವಾಸಸ್ಥಳ | : | ಭಟ್ಕಳ. | |

ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ

ನಾನು ವೇಣೂರು ಪ್ರಾಥಮಿಕ ಕೇಂದ್ರದಲ್ಲಿ ವೈಧ್ಯಾದಿಕಾರಿಯಾಗಿ ದಿನಾಂಕ 06.02.2009 ರಿಂದ ದಿನಾಂಕ 30.06.2014 ರ ತನಕ ಕರ್ತವ್ಯ ನಿರ್ವಹಿಸಿರುತ್ತೇನೆ.

02. ದಿನಾಂಕ 04.07.2011 ರಿಂದ ದಿನಾಂಕ 26.06.2012 ರ ತನಕ ಪಡಂಗಡಿ ಪ್ರಾಥಮಿಕ ಆರೋಗ್ಯ ಕೆಂದ್ರದಲ್ಲಿ ಹೆಚ್ಚುರಿ ಪ್ರಭಾರವನ್ನು ನಿರ್ವಹಿಸಿರುತೇನೆ. 2 ನೇ ಆರೋಪಿ ಸದರಿ ಪಡಂಗಡಿ ಆಸ್ಪತ್ತೆಯಲ್ಲಿ ಕಿರಿಯ ಮಹಿಳಾ ಸಹಾಯಕಿ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಆ ಸಂದರ್ಭದಲ್ಲಿ 2 ನೇ ಆರೋಪಿ ನನ್ನಿಂದ ಸಿ.ಆರ್ (Confidential Report) ನ್ನು ಪಡೆದಿರುತ್ತಾರೆ. ಈಗ ನೋಡುತ್ತಿರುವ ದಾಖಲೆ ಇದೇ ಇದ್ದು ಅದನ್ನು ನಿಪಿ.97 ಎಂದು ಅಂತ ಗುರುತಿಸಲಾಯಿತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ97(ಎ) ಎಂದು ಗುರುತಿಸಲಾಯಿತು.

03. ನಂತರ ಸದರಿ 2 ನೇ ಆರೋಪಿ, ಈ ವೊದಲು ನೀಡಿದ ದಾಖಲೆ ಕಳೆದು ಹೋಗಿದೆ ಎಂದು ಹೇಳಿ ಇನ್ನೊಂದು ಸಿಆರ್ ವರದಿಯನ್ನು ನನ್ನಿಂದ ಪಡೆದಿರುತ್ತಾರೆ.

ಈಗ ನೋಡುತ್ತಿರುವ ದಾಖಲೆ ಇದೇ ಇದ್ದು ಅದನ್ನು ನಿಪಿ.98 ಎಂದು ಅಂತ ಗುರುತಿಸಲಾಯಿತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ98(ಎ) ಎಂದು ಗುರುತಿಸಲಾಯಿತು.

4. 2018 ರಲ್ಲಿ ನಾನು ಪಿಜಿ ವ್ಯಾಸಂಗವನ್ನು ಎಜೆ ಆಸ್ಪತ್ರೆಯಲ್ಲಿ ಮಾಡುವ ಕಾಲಕ್ಕೆ, ಎ ಸಿ ಬಿ ಪೊಲೀಸರು ನನ್ನಿಂದ ಸದರಿ ನಿಪಿ-97 ಮತ್ತು 98 ರ ಸ್ಪಸ್ಟಿಕರಣವನ್ನು ಕೇಳಿರುತ್ತಾರೆ. ಅದಕ್ಕೆ ನಾನು ಲಿಖಿತವಾಗಿ ಸ್ಪಸ್ಟಿಕರಣವನ ಸಲ್ಲಿಸಿರುತ್ತೇನೆ. ಈಗ ನೋಡುತ್ತಿರುವ ದಾಖಲೆ ಇದೇ ಇದ್ದು ಅದನ್ನು ನಿಪಿ.99 ಎಂದು ಅಂತ ಗುರುತಿಸಲಾಯಿತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ99(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪಾರ ಶ್ರೀ ವೈ ವಿ ಹೆಚ್ ವಕೀಲರಿಂದಃ**

5. ನಾನು ಎರಡೆನೆ ಬಾರಿ ಎರಡನೆ ಆರೋಪಿಗೆ ಸಿ ಆರ್ ಬಗ್ಗೆ ಸಹಿ ಕೊಟ್ಟದ್ದು 2012 ರಲ್ಲಿ ಆಗಿದೆ. ನಿಪಿ - 97 ಮತ್ತು ನಿಪಿ 98 ನೋಡಿದರೆ, ಯಾವುದು ಮೊದಲು ಮತ್ತು ಯಾವುದು ನಂತರ ಕೊಟ್ಟದು ಅಂತ ತಿಳಿಯುವುದಿಲ್ಲ ಅದರೆ ಸರಿ . ನಾನು ಸ್ಪಸ್ಟಿಕರಣವನ್ನ ಎ ಸಿ ಬಿ ಪೊಲೀಸರಿಗೆ ನೀಡುವ ಕಾಲಕ್ಕೆ, ಸದರಿ ಎರಡು ದಾಖಲೆಗಳನ್ನ ಎ ಸಿ ಬಿ ಪೊಲೀಸರು ನನಗೆ ತೋರಿಸಿರುವ ಬಗ್ಗೆ ಈಗ ನೆನಪಿಗೆ ಬರುತಾ ಇಲ್ಲ.

**ಮರುವಿಚಾರಣೆ : ಇಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.